ಕರ್ನಾಟಕ ವಿಧಾನ ಸಭೆ

ಸೋಮವಾರ 28ನೇ ಜೂನ್ 2004 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಕೃಷ್ಣ) ರವರು

ಪೀಠವನ್ನು ಅಲಂಕರಿಸಿದ್ದರು

ಭಾಗ–I

1 ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಚನ ಸ್ವೀಕಾರ

(ಈ ಹಂತದಲ್ಲಿ ಪ್ರಮಾಣ ವಚನ ಸ್ವೀಕರಿಸಲಿದ್ದ ಮಾನ್ಯ ಸದಸ್ಯರು ಆಂಗ್ಲ ಭಾಷೆಯಲ್ಲಿ ಪ್ರಮಾಣ ವಚನ ಸ್ವೀಕರಿಸಲು ಪ್ರಾರಂಭಿಸಿದರು)

Sri Ivan Nigli (Nominated) Ivan Nigli having been nominated a Member of the Legislative Assembly

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) ತಾವು ಕನ್ನಡದಲ್ಲೇ ಪ್ರಮಾಣ ವಚನ ಸ್ವೀಕರಿಸಬೇಕು ತಾವು ಈ ರಾಜ್ಯದ ಶಾಸನ ಸಭೆಗೆ ನಾಮಕರಣಗೊಂಡಿದ್ದೀರಿ ಈ ರಾಜ್ಯದ ಭಾಷೆ ಕನ್ನಡ ಅದರ ಬಗ್ಗೆ ತಮಗೆ ಗೌರವ ಇರಬೇಕು ತಮಗೆ ಹೇಗೆ ಬರುತ್ತದೋ ಹಾಗೆ ಕನ್ನಡದಲ್ಲೇ ಮಾತನಾಡಿ ತಾವು ಇಂಗ್ಲಿಷ್‌ನಲ್ಲೇ ಮಾತನಾಡಬೇಕೆಂದಿದ್ದರೆ ಈ ಸದನಕ್ಕೆ ಬರುವ ಅವಶ್ಯಕತೆ ಇರಲಿಲ್ಲ ದಯವಿಟ್ಟು ಕನ್ನಡದಲ್ಲೇ ಪ್ರಮಾಣ ವಚನ ತಗೆದುಕೊಳ್ಳಿ

ಶ್ರೀ ಕೆ ಎಂ ಕೃಷ್ಣಮೂರ್ತಿ ಕನ್ನಡ ಮಾತ್ರ ಚೆನ್ನಾಗಿಯೇ ಮಾತನಾಡಬೇಕು ಹೇಗೇಗೋ ಮಾತನಾಡಿದರೆ ಅದು ಕನ್ನಡ ಆಗುವುದಿಲ್ಲ

ಅಧ್ಯಕ್ಷರು ಮಾನ್ಯ ಸದಸ್ಯರಿಂದ ಪ್ರಮಾಣ ವಚನ ಸ್ವೀಕಾರ

Sri Ivan Nigli (Nominated) I, Ivan Nigli having been nominated a member of the Legislative Assembly do swear in the name of god that I will bear true faith and allegiance to the constitution of India as by law established, that I will upheld the sovereignty and integrity of India and that I will faithfully discharge the duty upon which I am about to enter

(ಆದಾಗ್ಯೂ ಭಾರತ ಸಂವಿಧಾನದ 333ನೇ ಅನುಚ್ಛೇದದ ಮೇರೆಗೆ ಸನ್ಮಾನ್ಯ ರಾಜ್ಯಪಾಲರಿಂದ 12ನೇ ವಿಧಾನ ಸಭೆಗೆ ಸದಸ್ಯರಿಗೆ ನಾಮ ನಿರ್ದೇಶನಗೊಂಡಿರುವ **ಶ್ರೀ ಐವಾನ್ ನಿಗ್ಲಿರವರು** ಆಂಗ್ಲ ಭಾಷೆಯಲ್ಲಿ ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು)

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೇ..

ಅಧ್ಯಕ್ಷರು ಮಾನ್ಯ ವಾಟಾಳ್‌ರವರೇ, ನಾನು ತಮಗೆ ಅನಂತರ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಮಂಡನೆ

2 ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿ ಅವರ ಪರವಾಗಿ)

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ, 8(3)ರ ಪ್ರಕರಣದ ಮೇರೆಗೆ

1 2000ದ ಕರ್ನಾಟಕ ನಾಗರೀಕ ಸೇವಾ (ಕಾರ್ಯನಿರ್ವಹಣ ವರದಿಗಳ) ನಿಯಮಾವಳಿಯ ನಿಯಮ 3ಕ್ಕೆ ತಿದ್ದುಪಡಿವಾಡಿ ದಿನಾಂಕ 23 04 2004ರಂದು ಹೊರಡಿಸಲಾದ ಡಿಪಿಎಆರ್ 02 ಎಸಿಆರ್ 2003ನೇ ಸಂಖ್ಯೆಯ ಅಧಿಸೂಚನೆ.

1983ರ ಕರ್ನಾಟಕ ಶಿಕ್ಷಣ ಅಧಿನಿಯಮ (1995ರ ಕರ್ನಾಟಕ ಅಧಿನಿಯಮ-1) 145 (4)ರ ಪ್ರಕರಣದ ಮೇರೆಗೆ

2 1998ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಶಿಕ್ಷಣ ಸಂಸ್ಥೆಗಳಿಗೆ ಅನುದಾನ) ನಿಯಮಗಳ ನಿಯಮ 3ಕ್ಕೆ ತಿದ್ದುಪಡಿಮಾಡಿ ದಿನಾಂಕ 27 04 2004ರಂದು ಹೊರಡಿಸಲಾದ ಇಡಿ 127 ಸಿಇವಿ 2004ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಉಮು ಮುಖ್ಯಮಂತ್ರಿ ಅವರ ಪರವಾಗಿ)

1957 ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯ ಕಲಂ 39ರ ಪ್ರಕರಣದ ಮೇರೆಗೆ

3 ಆಇ:13 ಸಿಎಸ್ಎಲ್ 98 ದಿನಾಂಕ 29 08 1998ರಂದು ಹೊರಡಿಸಲಾದ ಅಧಿಸೂಚನೆಗೆ ತಿದ್ದುಪಡಿ ಮಾಡಿ ದಿನಾಂಕ 31 03 2004ರಂದು ಹೊರಡಿಸಲಾದ ಆಇ.345.ಸಿಎಸ್ಎಲ್ 2003(1) ಸಂಖ್ಯೆಯ ಅಧಿಸೂಚನೆ.

4 ಆಇ-216.ಸಿಎಸ್ಎಲ್-2000(1) ದಿನಾಂಕ 14 08.2000ರಂದು ಹೊರಡಿಸಲಾದ ಅಧಿಸೂಚನೆಗೆ ತಿದ್ದುಪಡಿ ಮಾಡಿ ದಿನಾಂಕ 31 03 2004ರಂದು ಹೊರಡಿಸಲಾದ ಆಇ 345 ಸಿಎಸ್ಎಲ್-2003(2)ನೇ ಸಂಖ್ಯೆಯ ಅಧಿಸೂಚನೆ

1965ರ ಕರ್ನಾಟಕ ಅಬಕಾರಿ ಕಾಯ್ದೆ 71(4)ರ ಪ್ರಕಣದ ಮೇರೆಗೆ

5 1967ರ ಕರ್ನಾಟಕ ಅಬಕಾರಿ (ಬಾಟ್ಲಿಂಗ್ ಆಫ್ ಲಿಕ್ಕರ್ಸ್) ನಿಯಮಾವಳಿಗಳ ನಿಯಮ 15ಕ್ಕೆ ತಿದ್ದುಪಡಿ ಹಾಗೂ ಹೊಸದಾಗಿ 15ಎ ಸೇರ್ಪಡೆಗೊಳಿಸಿ ದಿನಾಂಕ 06 04-2004ರಂದು ಹೊರಡಿಸಲಾದ ಎಫ್ಡಿ 10 ಪಿಇಎಸ್ 96(1)ನೇ ಸಂಖ್ಯೆಯ ಅಧಿಸೂಚನೆ.

6 1967ರ ಕರ್ನಾಟಕ ಅಬಕಾರಿ ಸನ್ನದು (ಸಾಮಾನ್ಯ ಷರತ್ತುಗಳು) ನಿಯಮಾವಳಿಯ ನಿಯಮ 11ಎ ಯನ್ನು ಹೊಸದಾಗಿ ಸೇರ್ಪಡೆಗೊಳಿಸಿ ದಿನಾಂಕ 06 04 2004ರಂದು ಹೊರಡಿಸುಲಾದ ಎಫ್ಡಿ 10 ಪಿಇಎಸ್ 96(2)ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) I(ಮುಖ್ಯಮಂತ್ರಿ ಅವರ ಪರವಾಗಿ)

1973ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿನಿಯಮ, 39(1)ರ ಮೇರೆಗೆ

1 ಕರ್ನಾಟಕ ನಗರ ನೀರು ಸರಬರಾಜು
ಮತ್ತು ಒಳಚರಂಡಿ ಮಂಡಳಿಯ 2001-02ನೇ ಸಾಲಿನ ವಾರ್ಷಿಕ ವರದಿ

1995ರ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧಿನಿಯಮ, ಕಲಂ 13(2) (3) ಮತ್ತು (6)ರ ಮೇರೆಗೆ

1 ಕರ್ನಾಟಕ ರಾಜ್ಯ ಮಹಿಳಾ ಆಯೋಗದ 2002-03ನೇ ಸಾಲಿನ ವಾರ್ಷಿಕ ವರದಿ

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262(3)ನೇ ಮತ್ತು 300(5)ನೇ ಪ್ರಕರಣದ ಮೇರೆಗೆ

1 ಹಾಸನ ಜಿಲ್ಲಾ ಪಂಚಾಯತ್‌ನ 1999–2000ನೇ ಸಾಲಿನ ವಾರ್ಷಿಕ ಲೆಕ್ಕಗಳ ಮತ್ತು ಪರಿಶೋಧನಾ ವರದಿ

2 ಉತ್ತರ ಕನ್ನಡ ಜಿಲ್ಲಾ ಪಂಚಾಯತ್, ಕಾರವಾರದ 2002–03ನೇ ಸಾಲಿನ ವಾರ್ಷಿಕ ಆಡಳಿತ ವರದಿ

3 ಶಿವಮೊಗ್ಗ ಜಿಲ್ಲಾ ಪಂಚಾಯತ್‌ನ 2000–01ನೇ ಸಾಲಿನ ವಾರ್ಷಿಕ ಲೆಕ್ಕಗಳ ಮತ್ತು ಆಡಿಟ್ ವರದಿಗಳನ್ನು ಮಂಡಿಸುತ್ತೇನೆ

II ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) ಅವರು

1956ರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧಿನಿಯಮ, 33(2),34(2), ಹಾಗೂ 354 ಪ್ರಕರಣದ ಮೇರೆಗೆ

1 ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿಯ 2002–03ನೇ ಸಾಲಿನ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

III (ಬೃಹತ್ ಹಾಗು ಮಧ್ಯಮ ಕೈಗಾರಿಕೆ, ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರ ಪರವಾಗಿ)

1956ರ ಕಂಪನಿ ಕಾಯಿದೆಯ, 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ಸ್ಟೇಟ್ ಎಲೆಕ್ಟ್ರಾನಿಕ್ಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ನಿಯಮಿತದ 2002–03ನೇ ಸಾಲಿನ ವಾರ್ಷಿಕ ವರದಿ

2 ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತದ 2002–03ನೇ ಸಾಲಿನ 39ನೇ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ

IV ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) ಅವರು

1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ 45(2)ನೇ ಪ್ರಕರಣದ ಮೇರೆಗೆ

1 ಗುಲ್ಬರ್ಗಾ ವಿಶ್ವವಿದ್ಯಾಲಯದ 2001–02ನೇ ಮತ್ತು 2002–03ನೇ ಸಾಲುಗಳ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

V (ಲೋಕೋಪಯೋಗಿ ಮತ್ತು ಇಂಧನ ಸಚಿವರ ಪರವಾಗಿ)

1956ರ ಕಂಪನಿ ಕಾಯಿದೆಯ, 619(ಎ) ಪ್ರಕರಣದ ಮೇರೆಗೆ

1 ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ 2002–03ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

VI (ಕೃಷಿ ಸಚಿವರು ಪರವಾಗಿ)

1956ರ ಕಂಪನಿ ಕಾಯಿದೆಯ, 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ನಿಯಮಿತ 2002–03ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) VII (ಪಶುಸಂಗೋಪನೆ ಮತ್ತು ವಕ್ಫ್ ಸಚಿವರ ಪರವಾಗಿ) 1956ರ ಕಂಪನಿ ಕಾಯಿದೆಯ, 619(ಎ) ಪ್ರಕರಣದ ಮೇರೆಗೆ

1 ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಹೆಬ್ಬಾಳ, ಬೆಂಗಳೂರು 2002–03ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ

ಅಧ್ಯಕ್ಷರು ಎಲ್ಲಾ ಕಾಗದ ಪತ್ರಗಳನ್ನು ಸದನದ ಮುಂದೆ ಮಂಡಿಸಲಾಯಿತು

3 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ವಿಷಯ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಕುರಿತು

†ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಅಧ್ಯಕ್ಷರೇ, ನಾನು ಹಿಂದೆ ಈ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೆ, ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಬಗ್ಗೆ ಸರ್ಕಾರ ಮಂದಗತಿಯ ಧೋರಣೆ ತಾಳುತ್ತಿದೆ, ಸರ್ಕಾರ ಪ್ರಮಾಣಿಕವಾದ ಪ್ರಯತ್ನ ಮಾಡುತ್ತಿಲ್ಲ ಎಂದು ನನಗೆ ಎಲ್ಲೋ ಒಂದು ಕಡೆ ಅನುಮಾನ ಬರುತ್ತಿದೆ ಇವತ್ತು ಉತ್ತರ ಕರ್ನಾಟಕದಲ್ಲಿ ಸತ್ಯಾಗ್ರಹ ಮತ್ತೆ ಪ್ರಾರಂಭವಾಗಿದೆ ವಕೀಲರುಗಳೆಲ್ಲಾ ನ್ಯಾಯಾಲಯವನ್ನು ಬಹಿಷ್ಕಾರ ಮಾಡಿದ್ದಾರೆ, ಮತ್ತು ಸತ್ಯಾಗ್ರಹವನ್ನು ಆರಂಭಿಸಿದ್ದಾರೆ ಸರ್ಕಾರ ಇದರ ಬಗ್ಗೆ ವಿಳಂಬ ಮಾಡುವುದರಿಂದ ಅದು ಬೇರೆ ದಾರಿಗೆ ತಲುಪತಕ್ಕಂತಹ ಚಿಂತನೆ ನಡೆಯುತ್ತಿದೆ ತಮಿಳುನಾಡು ಮತ್ತು ಕರ್ನಾಟಕದವರು ಇಬ್ಬರೂ ಒಂದೇ ಸಾರಿ ಹೈಕೋರ್ಟ್ ಸ್ಥಾಪನೆಗಾಗಿ ಮನವಿಯನ್ನು ಸಲ್ಲಿಸಿದ್ದರು ಆದರೆ ತಮಿಳುನಾಡಿನಲ್ಲಿ ಈಗಾಗಲೇ ಹೈಕೋರ್ಟ್ ಪೀಠ ಸ್ಥಾಪನೆಯಾಗಿದೆ ಕರ್ನಾಟಕದಲ್ಲಿ ವಿಳಂಬವಾಗುತ್ತಿದೆ ಇದಕ್ಕೆ ಕಾರಣವೇನು ಇದು ಬಹಳ ದೊಡ್ಡ ಸಮಸ್ಯೆಯಾಗಿ ಪರಿವರ್ತನೆಯಾಗುತ್ತಿದೆ 1956ರಲ್ಲಿ ಕರ್ನಾಟಕ ಏಕೀಕರಣವಾಯಿತು ಕರ್ನಾಟಕ ಏಕೀಕರಣಕ್ಕೋಸ್ಕರವಾಗಿ ಅನೇಕ ಹೋರಾಟಗಳು ನಡೆದು ತಪಸ್ಸಿನ ಬಲದಿಂದ ಕರ್ನಾಟಕ ಏಕೀಕರಣವಾಯಿತು ಕರ್ನಾಟಕ ಏಕೀಕರಣವಾಗಿದ್ದರೂ ಇನ್ನೂ ಉತ್ತರ ಕರ್ನಾಟಕ ಮತ್ತು ಹಳೆಯ ಮೈಸೂರು ಎನ್ನುವ ಭಾವನೆ ಇನ್ನು ಹೋಗಿಲ್ಲ ಭಾವನಾತ್ಮಕವಾಗಿ ಅದು ಇನ್ನು ಬೆಳೆದಿಲ್ಲ ಈ ಪರಿಸ್ಥಿರಿಯಲ್ಲಿ ಉತ್ತರ ಕರ್ನಾಟಕದ ಮೇಲೆ ನಿರಂತರವಾಗಿ ಏಟಿನ ಮೇಲೆ ಏಟು ಬೀಳುತ್ತಿದೆ ಉತ್ತರ ಕರ್ನಾಟಕವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ ಹೈದರಬಾದ್ ಕರ್ನಾಟಕವನ್ನು ಕಡೆಗಾಣಿಸಿದ್ದಾರೆ ಈ ಕಡೆ ಕೊಡಗು ಜಿಲ್ಲೆಯನ್ನೂ ಕೂಡ ಕಡೆಗಣಿಸಿದ್ದಾರೆ ಇದರ ಬಗ್ಗೆ ಯಾವುದೇ ಸರ್ಕಾರಗಳು ಬಂದರೂ ಪ್ರಾಮಾಣಿಕವಾಗಿ ಈ ಭಾಗಗಳ ಬೆಳಬಣಿಗೆ ಬಗ್ಗೆ ಮತ್ತು ಈ ಭಾಗಗಳ ಅಭಿವೃದ್ಧಿ ಬಗ್ಗೆ ಯಾವುದೂ ಚಿಂತನೆಯಾಗಿಲ್ಲ ಇಲ್ಲಿ ಹನುಮಂತಯ್ಯನವರು ಕಟ್ಟಿದ ವಿಧಾನಸೌಧ ಸಾಕಾಗಿತ್ತು ವಿಧಾನಸೌಧದ ಪಕ್ಕದಲ್ಲಿ 100 ಕೋಟಿ ರೂಪಾಯಿಯ ಮತ್ತೊಂದು ಸೌಧ ಬೇಕಾಗಿರಲಿಲ್ಲ ನೀವು ಹುಬ್ಬಳ್ಳಿ ಧಾರವಾಡದಲ್ಲಿ ಕಟ್ಟಿಸಬಹುದಾಗಿತ್ತು ಗುಲ್ಬರ್ಗದಲ್ಲಿ ಕಟ್ಟಿಸಬಹುದಾಗಿತ್ತು ಬೆಳಗಾಂನಲ್ಲಿ ಕಟ್ಟಿಸಬಹುದಾಗಿತ್ತು ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇಲ್ಲಿ ಇವರು ತಾರತಮ್ಯ ಮಾಡುತ್ತಿದ್ದಾರೆ

ಅಧ್ಯಕ್ಷರು ಮಾನ್ಯ ಹಿರಿಯ ಸದಸ್ಯರು ಯಾವ ವಿಚಾರದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೀರೋ ಅದರ ಬಗ್ಗೆ ನೇರವಾಗಿ ಹೇಳಿ, ಸರ್ಕಾರ ಅದಕ್ಕೆ ಪರಿಹಾರ ಕಂಡುಕೊಳ್ಳುತ್ತದೆ ದಯಮಾಡಿ ಬೇರೆ ಬೇರೆ ವಿಚಾರಗಳಿಗೆ ಹೋಗಬಾರದು